ಶ್ರೀ ಕೆ. ಎಚ್. ರಂಗನಾಥ್: ೧೫ ವರ್ಷದೊಳಗೆ ಪರಭಾರೆ ಮಾಡಬಾರದು ಎಂಬ ಕಂಡೀಷನ್ ಸರ್ಕಾರದವರು ಹಾಕಿರಲಿಲ್ಲವೇ? ಸರ್ಕಾರ ಆರೀತಿ ಕಂಡೀಷನ್ ಹಾಕಿದ್ದರೆ, ಮಾರಾಟ ಮಾಡಿರುವವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಚ್. ವಿ. ಕೌಜಲಗಿ: ಈ ವಿಚಾರದಲ್ಲಿ ಎನ್‌ಕ್ವೈರಿ ನಡೆಯುತ್ತಿದೆ, ಎನ್‌ಕ್ವೈರಿ ಇನ್ನೂ ಪೂರ್ಣ ವಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ: ೨೮೯೯ ಎಕರೆಯಲ್ಲಿ ಕೆಲವು ತಹಸೀಲ್ದಾರರು, ಕೆಲವು ಅಸಿಸ್ಟೆಂಟ್ ಕಮಿಷನರು, ಕೆಲವು ಸರ್ಕಾರದವರು ಹಂಚಿದ್ದಾರೆಂದು ಹೇಳಿದ್ದಾರೆ. ಸರ್ಕಾರದವರು ಎಷ್ಟು ವಿಲೇವಾರಿ ಮಾಡಿದ್ದಾರೆ, ತಹಸೀಲ್ದಾರರು ಎಷ್ಟು ವಿಲೇವಾರಿ ಮಾಡಿದ್ದಾರೆ, ಬಾಕಿ ಯಿದ್ದನ್ನು ಎಷ್ಟು ವಿಲೇವಾರಿ ಮಾಡಿದ್ದಾರೆ ಎಂಬುದನ್ನು ಹೇಳುತ್ತಾರೆಯೇ? ಕಾರ್ಪೊರೇಷನ್ ಪ್ರದೇಶದಲ್ಲಿ ಎಷ್ಟು ಭೂಮಿ ಇದೆ ಎನ್ನು-ವುದನ್ನು ಕಂಡುಕೊಳ್ಳುವುದಕ್ಕೆ ಏನು ಬಾಧಕವಿದೆ?

ಶ್ರೀ ಎಚ್. ವಿ. ಕೌಜಲಗಿ: ಈ ಪ್ರಶ್ನೆಗೆ ಸಾಕಷ್ಟು ನೋಟೀಸ್ ಕೊಟ್ಟರೆ ಹೇಳಬಹುದು.

1-30 P. M.

ಶ್ರೀ ಜಯಪ್ರಕಾಶ ನಾರಾಯಣ : ದೇವಾಲಯಕ್ಕೆ, ಸಂಬಂಧಪಟ್ಟ ಮುಜರಾಯೀ ಜಮೀನು ಕೊಟ್ಟಿದ್ದಾರಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ : ೧೯೬೯ ರ ನಂತರ ಯಾವುದೂ ಕೊಟ್ಟಿಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ : ಜಮೀನು ಕೊಟ್ಟಿರುವುದರಲ್ಲಿ ಹೊರಗಡೆಯವರಿಗೆ ಕೊಟ್ಟಿದ್ದರೆ ಅವರ ಸಂಖ್ಯೆ ಎಷ್ಟು ? ಈ ಮನೆಯ ಯಾವ ಯಾವ ಸದಸ್ಯರಿಗೆ ಕೊಟ್ಟಿದ್ದೀರಿ ? ಇದರಲ್ಲಿ ಮಾರಿಕೊಂಡ ಜಮೀನು ಎಷ್ಟು ? ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಚ್. ವಿ. ಕೌಜಲಗಿ : ಎಷ್ಟು ಜನ ಎಂಬ ಸಂಖ್ಯೆ ಇಲ್ಲ. ಇದರಲ್ಲಿ ಒಂದು ಎಕರೆಯಿಂದ ನಾಲ್ಕು ಎಕರೆ ವರೆಗೆ ಜಮೀನು ಇದೆ. ಎಲ್ಲರೂ ಈ ರಾಜ್ಯದವರೇ ಇದ್ದಾರೆ. ಹೊರಗಿನವರು ಯಾರೂ ಇಲ್ಲ. ವಿವರದ ಬಗ್ಗೆ ಪ್ರತೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

ಶ್ರೀ ಕೆ. ಎಂ. ಪುಟ್ಟಸ್ವಾಮಿ : ಒಂದೊಂದು ಸೈಟು ೨೦ ಸಾವಿರ ೩೦ ಸಾವಿರ, ೪೦ ಸಾವಿರ ಬೆಲೆ ಬಾಳುವ ರೇವನ್ಯೂ ಲ್ಯಾಂಡ್ ಕೊಟ್ಟಿದ್ದೀರಿ. ಮಾರಾಟ ಮಾಡಿಕೊಂಡವರಿಂದ ಪುನಃ ಸ್ವಾಧೀನಪಡಿಸಿಕೊಳ್ಳಲು ಸರಕಾರ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಚ್. ವಿ. ಕೌಜಲಗಿ : ಇದರ ಬಗ್ಗೆ ಇನ್‌ಕ್ವಾಯರಿ ನಡೆದಿದೆ. ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇವೆ.

AVAILABILITY COPIES OF MYSORE PANCHAYAT ACT AND RULES

574. SRI B. M. IDINABBA (Mangalore):—

Will the Minister for Development be pleased to state:—

(*a*) whether there is not enough stock of copies of Mysore Panchayat Act Rules, 1959 ;

(SRI B. M. IDINABBA)

(*b*) whether it has come to the notice of Government that copies of the said Act are not available in all the Panchayat Board Office in the State ;

(*c*) whether it has come to the notice of Government that Panchayat Boards are put to lot of inconvenience sometimes due to ignorance of Act and Rules for want of the said Act;

(*d*) whether Government intends to make arrangements for supply of Mysore Panchayat Act and Rules to all the Panchayat Boards in the state at least in future ?

SRI B. C. GOWDAR (Deputy Minister for Co-operation):—

(*a*) No.

(b) No.

(*c*) No.

(*d*) Government Press has been ordered to print the copies of the Panchayat Act and Rules. After they are printed anybody who is in need of the same may have it on payment.

ಶ್ರೀ ಬಿ. ಎಂ. ಇದಿನಬ್ಬ :- ೧೯೫೯ ನೇ ಇಸವಿಯ ಪಂಚಾಯತಿ ಶಾಸನ ಮತ್ತು ನಿಯಮಗಳ ಪ್ರತಿಗಳು ಸಾಕಷ್ಟು ಸಂಗ್ರಹ ಇಲ್ಲದೇ ಇರುವಂತೆ ಏಕೆ ಆಯಿತು ?

† ಶ್ರೀ ಬಿ. ಎಲ್ ಗೌಡ : ಮೊದಲು ಪ್ರಿಂಟ್ ಮಾಡಿಸಿ ಪ್ರತಿ ಒದಗಿಸಿದೆ. ಈಗ ಆಕ್ಟ್ ಮತ್ತು ರೂಲ್ಸ್ ಪುನಃ ಪ್ರಿಂಟ್ ಮಾಡಿ ಎಂದು ಪ್ರೆಸ್ಸಿಗೆ ಆದೇಶ ಕೊಟ್ಟಿದೆ. ಈಗ ಅದು ಪ್ರಿಂಟ್ ಆಗುತ್ತಾ ಇದೆ.

ಶ್ರೀ ಪಂಜೆ ಶಿವಣ್ಣ : ಪಂಚಾಯತಿಗಳಲ್ಲಿ ಲಕ್ಷಾಂತರ ರೂಪಾಯಿ ದುರುಪಯೋಗ ಮಾಡಿದ್ದಾರೆ. ಸರಕಾರದ ಗಮನಕ್ಕೆ ಬಂದರೆ ಕಡ್ಡಾಯವಾಗಿ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಲ್ ಗೌಡ : ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಎಂ ಇದಿನಬ್ಬ : ಶಾಸನದ ಮತ್ತು ನಿಯಮಗಳ ಪ್ರತಿ ಇಲ್ಲದ ಮೂಲಕ ಪಂಚಾಯತಿ ಕಾರ್ಯಕ್ರಮದಲ್ಲಿ ಹೆಚ್ಚು ಕಡಿಮೆಯಾಗಿದೆ. ಅದು ಗಮನಕ್ಕೆ ಬಂದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ಎಲ್. ಗೌಡ : ತಪ್ಪುಮಾಡಿದ್ದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

THE WORK OF BANGALORE VARTHUR ROAD

638. SRI K. PRABHAKAR (Varthur):—

Will the Minister for Public Works be pleased to state:—

(*a*) the stage of the work of P.W.D. road from Bangalore-Varthur road to Doddannelli *via* Yamalur, Devarabeesanalli, etc. ;

(*b*) the estimated cost of the road ;

(*c*) when these road is not be completed ;